ಬಸ್‌ಗಳಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್ ಡಿಪೋದ ಪಕ್ಕದಲ್ಲಿಯೇ ಪ್ರೈವೇಟ್ ಬಸ್ ಸ್ಟ್ಯಾಂಡ್ ಒಂದನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅದಕ್ಕೆ ಆದಷ್ಟು ಜಾಗ್ರತೆ ಸರ್ಕಾರ ಮಾನ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸಂಬಂಧಪಟ್ಟಂತಹ ವಿಚಾರದಲ್ಲಿ ಅಭಿವೃದ್ಧಿ ಪಡಿಸುವುದರ ಬಗ್ಗೆ ಅವರು ಪ್ರಶ್ನೆ ಕೇಳಿದ್ದಾರೆ. ಅಲ್ಲಿನ ಪರಿಸ್ಥಿತಿಯನ್ನು ನಾನು ಸ್ವತಃ ವೀಕ್ಷಣೆ ಮಾಡಿದ್ದೇನೆ. ಅಲ್ಲಿ ಅಗತ್ಯತೆ ಇರುವಂತಹ ಎಲ್ಲಾ ಕೆಲಸಗಳನ್ನೂ ಕೂಡ ಮಾಡುವುದರ ಬಗ್ಗೆ ನಾವು ತೀರ್ಮಾನ ಮಾಡಿದ್ದೇವೆ. ಅದನ್ನು ಮುಂದಿನ ದಿನಗಳಲ್ಲಿ ಕಾರ್ಯಗತಗೊಳಿಸುತ್ತೇವೆ. ಖಾಸಾಗಿ ಬಸ್ ನಿಲ್ದಾಣವನ್ನು ನಿರ್ಮಿಸುವುದರ ಬಗ್ಗೆ ಕೂಡ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆ. ಅಲ್ಲಿ ಜಾಗದ ಲಭ್ಯತೆ ಇಲ್ಲದೇ ಇರುವುದರಿಂದ ಖಾಸಗಿ ಬಸ್ ನಿಲ್ದಾಣ ಆರಂಭಿಸುವ ಬಗ್ಗೆ ತಡವಾಗಿದೆ. ಆ ಬಗ್ಗೆ ಈಗಲೂ ಸಹಾ ಸರ್ಕಾರದ ಮುಂದೆ ಪ್ರಸ್ತಾವನೆ ಇದೆ. ಮುಂದಿನ ದಿನಗಳಲ್ಲಿ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಕೂಡ ಬಸ್ಸು ನಿಲ್ದಾಣ ಆರಂಭಿಸುವ ಪ್ರಸ್ತಾವನೆ ಇದೆ. ಅಲ್ಲಿ 6 ಎಕರೆ ಜಾಗ ಇದೆ. ಸಂಬಂಧಪಟ್ಟಂತಹ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಮತ್ತು ಡಿ.ಸಿ.ಯವರನ್ನು ಕರೆದುಕೊಂಡು ಹೋಗಿ ನಾವು ಆ ಜಾಗವನ್ನು ತೋರಿಸಿದ್ದೇವೆ. ಡಿ.ಸಿ.ಯವರು ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರು ಆ ಕಡೆಗೆ ತಕ್ಷಣ ಗಮನ ಹರಿಸಿ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಅನೇಕ ತಾಲ್ಲೂಕು ಕೇಂದ್ರಗಳಲ್ಲಿ ಅಗತ್ಯವಾಗಿ ಬಸ್ಸು ಘಟಕಗಳನ್ನು ಪ್ರಾರಂಭ ಮಾಡುವುದರ ಬಗ್ಗೆ ಅನೇಕ ಶಾಸಕ ಮಿತ್ರರುಗಳು ನನ್ನ ಮುಂದೆ ಪ್ರಸ್ತಾವನೆಗಳನ್ನು ಸಲ್ಲಿಸಿದ್ದಾರೆ. ನಮ್ಮ ಸಾರಿಗೆ ಸಂಸ್ಥೆಯಲ್ಲಿ ಕಟ್ಟಡ ನಿರ್ಮಾಣ ಮಾಡುವುದಕ್ಕಾಗಿ ವರ್ಷಕ್ಕೆ 7 ಕೋಟಿ ರೂಪಾಯಿಗಳು ಮಾತ್ರ ಹಣದ ಲಭ್ಯತೆ ಇರುತ್ತದೆ. ಆದರೆ ಅವರ ಬೇಡಿಕೆ 22 ಕೋಟಿ ರೂಪಾಯಿಗಳಿಗೂ ಮೀರಿ ಇದೆ. ಆದುದರಿಂದ ಇದರ ಬಗ್ಗೆ ಸಮಗ್ರವಾದಂತಹ ಯೋಜನೆಯೊಂದನ್ನು ಸಿದ್ಧಪಡಿಸಿಕೊಂಡು ಬಸ್ ಘಟಕ ನಿರ್ಮಿಸುವುದರ ಬಗ್ಗೆ ಆಲೋಚನೆ ನನ್ನ ಮುಂದೆ ಇದೆ. ಮುಂದಿನ ದಿನಗಳಲ್ಲಿ ಅದನ್ನು ಕಾರ್ಯಗತಗೊಳಿಸುವ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆ.

ಭೂಮಾಪನಾ ನಕಾಶೆ

422 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಡಗು ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಭೂಮಾಪನ ನಕಾಶೆ ಹರಿದು ಹೋಗಿರುವ ವಿಚಾರ ಸರ್ಕಾರ ಗಮನಕ್ಕೆ ಬಂದಿದೆಯೇ?*

ಅ) ಹಾಗಿದ್ದಲ್ಲಿ ಹೊಸ ನಕಾಶೆ ತಯಾರಿಸುವ ಕಾರ್ಯ ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಆ) ಹೌದು.

ಅ) ಶೀಘ್ರದಲ್ಲೇ ಪ್ರಾರಂಭ ಮಾಡಲಾಗುವುದು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರಗಳನ್ನು ಒದಗಿಸಿದ್ದಾರೆ. ಭೂ ಮಾಪನ ನಕಾಶೆ ಹರಿದು ಹೋಗಿರುವ ವಿಚಾರ ಸರ್ಕಾರದ ಗಮನಕ್ಕೆ ಯಾವಾಗ ಬಂದಿತು? ಅದರ ಪರಿಣಾಮವೇನು ಎಂಬುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಹಾಗೆಯೇ ಹೊಸ ನಕಾಶೆ ತಯಾರಿಸುವ ಕಾರ್ಯವನ್ನು ಶೀಘ್ರವಾಗಿ ಅಂದರೆ ಯಾವಾಗ ಪ್ರಾರಂಭ ಮಾಡುತ್ತೀರಿ? ನಕಾಶೆಗಳು ಇಲ್ಲದಿರುವುದರಿಂದ ಪೋಡಿ ಪ್ರಕರಣಗಳು ಎಷ್ಟು ಬಾಕಿ ಉಳಿದಿವೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯಲ್ಲಿ ಒಟ್ಟು 515 ಗ್ರಾಮಗಳಿವೆ. ಒಂದು ಗ್ರಾಮಕ್ಕೆ ಸಾಮಾನ್ಯವಾಗಿ ಒಂದು ನಕಾಶೆ ಇರುತ್ತದೆ. ದೊಡ್ಡ ಗ್ರಾಮಗಳಿಗೆ ಎರಡರಿಂದ ಐದು ನಕಾಶೆಗಳು ಇರುತ್ತವೆ. ಹೀಗಾಗಿ ಸುಮಾರು 1000 ನಕಾಶೆಗಳು ಕೊಡಗು ಜಿಲ್ಲೆಯಲ್ಲಿ ಇರುತ್ತವೆ. ಇದರಲ್ಲಿ ಒಟ್ಟು 515 ಗ್ರಾಮಗಳಲ್ಲಿ 130 ಗ್ರಾಮಗಳಿಗೆ ನಕಾಶೆಗಳು ಲಭ್ಯವಿಲ್ಲ. ಈ ಗ್ರಾಮಗಳಿಗೆ ಸಂಬಂಧಪಟ್ಟಂತೆ ಭೂ-ದಾಖಲೆ ಸಂರಕ್ಷಿಸುವ ಕಾರ್ಯ ತುಂಬಾ ದುಸ್ತರವಾಗಿದೆ. ಉಳಿದ 387 ಗ್ರಾಮಗಳ ನಕಾಶೆಗಳಲ್ಲಿ ಹೆಚ್ಚಿನ ಅಂಶ ಗ್ರಾಮಕ್ಕೆ ಒಂದು ಪ್ರತಿ ಲಭ್ಯವಾಗಿದೆ. ಕೊಡಗು ಜಿಲ್ಲೆಯಲ್ಲಿ ಹಿಡುವಳಿಯ ನಕ್ಷೆಗಳು ಲಭ್ಯವಿರುವುದಿಲ್ಲ. ಗ್ರಾಮ ನಕಾಶೆಗಳಲ್ಲಿಯೇ ವಿಭಾಗಗಳನ್ನು ಮಾಡಲಾಗುತ್ತಿದೆ. ಕೊಡಗು ಜಿಲ್ಲೆಯ ಗ್ರಾಮ ನಕಾಶೆಗಳು ಹಾಗೂ ಹಿಡುವಳಿ ನಕಾಶೆಗಳನ್ನು ತಯಾರಿಸುವುದು ಅಗತ್ಯವಾಗಿರುತ್ತದೆ. ಈಗ ಲಭ್ಯವಿರುವ ನಕಾಶೆಗಳನ್ನು ಕೂಡಲೇ ಗಣಕೀಕರಣ ಮಾಡಿ, ಲ್ಯಾಮಿನೇಷನ್ ಮಾಡಿ ಕಾಪಾಡಿಕೊಳ್ಳುವುದು ಸೂಕ್ತವಾಗಿದೆ. ಕೊಡಗು ಜಿಲ್ಲಾಧಿಕಾರಿಗಳು 7.8.2000 ದಲ್ಲಿ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಶಿಥಿಲವಾಗಿರುವ ನಕ್ಷೆಗಳನ್ನು ಆದಷ್ಟು ಜಾಗ್ರತೆ ಸಂರಕ್ಷಣೆ ಮಾಡುವ ಕೆಲಸ ಮಾಡಬೇಕಾಗಿದೆ, ಇದಕ್ಕೆ ಸುಮಾರು ಐದು ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಆ ಹಣ ಒದಗಿಸಬೇಕೆಂದು ಅವರು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದಾರೆ. ಅದನ್ನು ಗಣಕೀಕರಣ ಮಾಡುವುದಕ್ಕೆ ಆದಷ್ಟು ಜಾಗ್ರತೆ ಹಣವನ್ನು ಕೊಟ್ಟು ಅದನ್ನು ಉಳಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಯಾವಾಗ ಆ ಕಾರ್ಯ ಪ್ರಾರಂಭ ಮಾಡುತ್ತೀರಿ? ಶೀಘ್ರವಾಗಿ ಎಂದರೆ, ಶೀಘ್ರ ಪರಿಶೀಲನೆ, ಇದು ಮಾಮೂಲಿ ಉತ್ತರವಾಗಿದೆ. ತಾವು ಆದಷ್ಟು ಬೇಗ ಮಾಡುತ್ತೀರಾ? ಇದರಿಂದ ಪೋಡಿ ಪ್ರಕರಣಗಳು ಎಷ್ಟು ಬಾಕಿ ಇದೆ? ಇದಕ್ಕೆ ನನಗೆ ಉತ್ತರ ಬರಲಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಪೋಡಿ ಪ್ರಕರಣಗಳು ಎಷ್ಟು ಬಾಕಿ ಇವೆ ಎಂಬುದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ, ಅದನ್ನು ನಾನು ಕಳುಹಿಸಿ ಕೊಡುತ್ತೇನೆ. ಆದಷ್ಟು ಜಾಗ್ರತೆ ಇದನ್ನು ಮಾಡದೆ

ಹೋದರೆ ನಶಿಸಿ ಹೋಗುತ್ತವೆ. ಇರತಕ್ಕ ಸರ್ವೇ ನಂಬರ್ ಯಾವುದೂ ಇರುವುದಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಡೀ ರಾಜ್ಯದಲ್ಲಿ ದಾಖಲಾತಿ ಕ್ರಮಗಳನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಎಲ್ಲಿ ಈ ರೀತಿ ಆಗಿದೆ ಅಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ತಾಳೆ ಬೆಳೆ ಮತ್ತು ತಾಳೆ ಎಣ್ಣೆ ಅಭಿವೃದ್ಧಿ

425 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ತಾಳೆ ಬೆಳೆ ಮತ್ತು ತಾಳೆ ಎಣ್ಣೆ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೇನು?*

ಆ) *ತಾಳೆ ಬೆಳೆ ಮತ್ತು ಸಂಸ್ಕರಣೆಯಲ್ಲಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೆ ಬಂದಿದ್ದಲ್ಲಿ ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು?*

ಇ) *ಈ ಬೆಳೆಯನ್ನು ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ?*

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ತಾಳೆ ಬೆಳೆ ಮತ್ತು ತಾಳೆ ಎಣ್ಣೆ ಅಭಿವೃದ್ಧಿಗಾಗಿ ಕೆಳಕಾಣಿಸಿದ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ:

1) ತಾಳೆಬೆಳೆ ಪ್ರದೇಶ ವಿಸ್ತರಣೆಗಾಗಿ ರೈತರಿಗೆ ಸಹಾಯಧನ ನೀಡಲಾಗುತ್ತಿದೆ.
2) ರೈತರಿಗೆ ತಾಂತ್ರಿಕ ಮಾಹಿತಿ ಒದಗಿಸಲು ಭೀಮನಕೊಲ್ಲಿಯಲ್ಲಿ ಪ್ರಾತ್ಯಕ್ಷತಾ ಮುಂಚೂಣಿ ಕ್ಷೇತ್ರವನ್ನು ನಿರ್ಮಿಸಲಾಗಿದೆ.
3) ಉತ್ತಮ ತಾಳೆ ಸಸಿಗಳ ಉತ್ಪಾದನೆ ಮತ್ತು ವಿತರಣೆಗಾಗಿ ತಾರಕ ಬೀಜೋತ್ಪಾದನಾ ಕೇಂದ್ರ ಸ್ಥಾಪಿಸಲಾಗಿದೆ.
4) ತಾಳೆ ಹೆಣ್ಣಿನ ಸಂಸ್ಕರಣೆಗಾಗಿ 2 ಸಂಸ್ಕರಣ ಘಟಕಗಳನ್ನು ಸ್ಥಾಪಿಸಲಾಗಿದೆ.
5) ರೈತರ ತಾಳೆ ತಾಕಿನಲ್ಲಿ ಹನಿ ನೀರಾವರಿ ಅಳವಡಿಸಲು ಸಹಾಯಧನ ಒದಗಿಸಲಾಗುತ್ತಿದೆ.
6) ಬಂಜರು ಭೂಮಿಯಲ್ಲಿ ತಾಳೆ ಅಭಿವೃದ್ಧಿಗೆ ಯೋಜನೆ ಹಮ್ಮಿಕೊಳ್ಳಲಾಗಿದೆ.
7) ಡೀಸೆಲ್ ಪಂಪ್‌ಸೆಟ್‌ಗಳನ್ನು ಅಳವಡಿಸಲು ರೈತರಿಗೆ ಶೇಕಡ 50 ಸಹಾಯಧನ ಒದಗಿಸಲಾಗುತ್ತದೆ.